

# ಮೊಬೈಲ್ ಜಾಲ, ತಪ್ಪಿತೆ ತಾಳ?

ನೋಡೋಣ? ಮೊಬೈಲ್‌ನಲ್ಲಿ ಮೆಮೊರಿ ಕಾರ್ಡ್ ಇರುವಾಗ ನಮ್ಮ ಮೆದುಳಿನ ಮೆಮೊರಿ ಸ್ಪೇಸ್ ಏಕೆ ತುಂಬಿಸುವುದು ಎನ್ನುವ ಧೋರಣೆ ಈಗಿನದು. ಹೀಗಾಗಿ ನಾವೆಲ್ಲ ಹೊಸ ತೆರನಾದ ವಿಸ್ಮೃತಿಗೆ ಒಳಗಾಗಿದ್ದು ನಮಗ್ಯಾರಿಗೂ ಅದು ಸಮಸ್ಯೆಯಾಗಿ ಕಾಣುತ್ತಿಲ್ಲ.

ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹಿಂದೆ ಎಸ್.ಎಸ್. ಖಂಡ್ರೆ ಎಂಬ ಸಾರ್ವಜನಿಕ ಸಂಪರ್ಕಾಧಿಕಾರಿ ಇದ್ದರು. ಪಾಲಿಕೆಯ ಸುಮಾರು 400 ಅಧಿಕಾರಿಗಳ ಮೊಬೈಲ್ ಸಂಖ್ಯೆಗಳು ಅವರ ನಾಲಿಗೆ ತುದಿಯಲ್ಲೇ ಇದ್ದವು. ಅವರ ಬಳಿ 'ಇಂತಹ ಅಧಿಕಾರಿಯ ನಂಬರ್ ಬೇಕಿತ್ತು' ಎಂದು ಕೇಳಿದರೆ ಸಾಕಿತ್ತು, 'ಬರ್ಕಳ್ಳಿ ಸರ್, 94484...' ಎಂದು ಪಟಪಟನೆ ಆ ಸಂಖ್ಯೆ ಹೇಳುತ್ತಿದ್ದರು. ಅವರೂ ಸ್ಮಾರ್ಟ್‌ಫೋನ್ ಖರೀದಿಸಿ ಸ್ವಲ್ಪ ಕಾಲ ಕಳೆದ ಬಳಿಕ ಲೋಕಾಭಿರಾಮವಾಗಿ ಹರಟೆ ಹೊಡೆಯುವಾಗ 'ಮೊದಲಿನಂತೆ ಅಂಕಿಗಳನ್ನು ಒತ್ತಿ ಡಯಲ್ ಮಾಡುವ ಪರಿಪಾಟ ನಿಂತುಹೋಗಿದೆ ನೋಡಿ, ಹಲವು ನಂಬರ್‌ಗಳು ನನಗೀಗ ಮರೆತೇಬಿಟ್ಟಿವೆ. ಮೊಬೈಲ್‌ನಿಂದ ನನಗೆ ಮರೆಗುಳಿ ಕಾಯಿಲೆ ಬಂದಿದೆ' ಎಂದು ತಮಾಷೆ ಮಾಡುತ್ತಿದ್ದರು. ಆದರೆ ಇದು ತಮಾಷೆಯ ಮಾತಲ್ಲ, ಅತಿಯಾದ ಸ್ಮಾರ್ಟ್‌ಫೋನ್ ಅವಲಂಬನೆಯಿಂದಾಗಿ ಲಕ್ಷ, ಲಕ್ಷ ಮಂದಿಗೆ ಈ ಕಾಯಿಲೆ ಸದ್ದಿಲ್ಲದೆ ಅಂಟಿದ್ದುದಿಟ.

**ಅದೇ ಫೋನಿನ ಡಿಜಿಟಲ್ ಕಣಿವೆಯೊಳಗೆ ಇಳಿದಂತಹ ಬಾಗಿದ ತಲೆಗಳ ವ್ಯಕ್ತಿಗಳನ್ನು. ಕ್ಯಾಂಟಿನ್‌ನಲ್ಲಿ ಊಟ ಮಾಡುವಾಗ, ಕಾಫಿ ಬಾರ್‌ನಲ್ಲಿ ಕುಳಿತು ಕಾಫಿ ಹೀರುವಾಗ ಅಥವಾ ಡೊಮಿನೋಸ್, ಪಿಜ್ಜಾ ಹಟ್‌ಗಳಲ್ಲಿ ಕುಳಿತಿರುವಾಗ ನಾವು ಏನು ಮಾಡುತ್ತಿದ್ದೇವೆ ಎನ್ನುವುದನ್ನೇ ಮರೆತು ನೀಲಿ ಸ್ಕ್ರೀನಿನಲ್ಲಿ ಬಂಧಿಯಾಗುವುದು ಈಗಿನ ಸಾಮಾನ್ಯ ನೋಟ.**

ಮೊಬೈಲ್ ಸಂಖ್ಯೆಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳುವ ಮಾತನ್ನು ಸದ್ಯ ಪಕ್ಕಕ್ಕೆ ಇಡೋಣ. ಹಿಂದೆ ಹಲವು ಬಾರಿ ಹೋದ ತಾಣಗಳಿಗೆ ಮತ್ತೆ ಹೋಗಬೇಕಾದರೆ ಮ್ಯಾಪ್ ಹಾಕಿಕೊಳ್ಳುವ ಪ್ರವೃತ್ತಿ ಈಗೀಗ ಹೆಚ್ಚಾಗಿ ಬೆಳೆದುಬಿಟ್ಟಿದೆಯಲ್ಲ, ಅದಕ್ಕೇನು ಮಾಡೋಣ? ಸದಾ ಕೈಗೆಟಕುವ ಜಾಗದಲ್ಲೇ ಮೊಬೈಲ್ ಇರಬೇಕು ಎನ್ನುವುದು ಎಲ್ಲರ ಅಲಿಖಿತ ನಿಯಮ. ನಡುರಾತ್ರಿ ಎಚ್ಚರವಾದಾಗಲೂ ಈ ಸಾಧನದ ಮೇಲೊಮ್ಮೆ ಕಣ್ಣು ಆಡಿಸಿದರೆ ಲಾಲಿ ಹಾಡಿದಂತಾಗಿ ಮತ್ತೆ ನಿದ್ರೆ ಬಂದೀತು ಎನ್ನುವಂತಹ ಸನ್ನಿವೇಶ ಈಗಿನದು. ಎಲ್ಲೋ ಅಳುವ ಮಗುವಿನ ಧ್ವನಿಗೆ ಕವಿ ಜಿಎಸ್‌ಎಸ್ ಕಿವಿಯಾದಂತೆ ಕರೆ ಬಂದ ಸದ್ದು ಮೊಳಗಿದರೆ ಸಾಕು, ಎಲ್ಲರೂ ತಮ್ಮ ಮೊಬೈಲ್‌ಗಳನ್ನು ಒಮ್ಮೆ ನೋಡಿಕೊಳ್ಳುವವರೇ. ಮಿಕ್ಕ ಯಾವ ವಿಷಯವೂ ತಲೆಗೆ ಹೋಗದಿದ್ದರೂ ಫೋನ್‌ನ ರಿಂಗಣದ ಸದ್ದಿಗೆ ಮಾತ್ರ ನರವ್ಯೂಹ ಅದು ಹೇಗೆ ಮೆದುಳಿಗೆ ಹೈ ಅಲರ್ಟ್ ಸಂದೇಶ ಕಳಿಸುತ್ತದೆಯೋ, ಪರಮ ಆಶ್ಚರ್ಯ.

ಏರ್‌ಪೋರ್ಟ್ ಇರಲಿ, ರೈಲು–ಬಸ್ ನಿಲ್ದಾಣ ಇರಲಿ, ದೇವಾಲಯ ಇರಲಿ, ಮಾಲ್ ಇರಲಿ ಅಥವಾ ಕಾಲೇಜು ಕ್ಯಾಂಪಸ್ಸೇ ಆಗಿರಲಿ ಎಲ್ಲ ಕಡೆ ನಾವು ಕಾಣುವುದು ಒಂದೇ ನೋಟವನ್ನು. ಅದೇ ಫೋನಿನ ಡಿಜಿಟಲ್ ಕಣಿವೆಯೊಳಗೆ ಇಳಿದಂತಹ ಬಾಗಿದ ತಲೆಗಳ ವ್ಯಕ್ತಿಗಳನ್ನು. ಕ್ಯಾಂಟಿನ್‌ನಲ್ಲಿ ಊಟ ಮಾಡುವಾಗ, ಕಾಫಿ ಬಾರ್‌ನಲ್ಲಿ ಕುಳಿತು ಕಾಫಿ ಹೀರುವಾಗ ಅಥವಾ ಡೊಮಿನೋಸ್, ಪಿಜ್ಜಾ ಹಟ್‌ಗಳಲ್ಲಿ ಪಿಜ್ಜಾ–